# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018-19ನೇ ಸಾಲಿನಲ್ಲಿ ಸೌರಶಕ್ತಿ ಯೋಜನೆಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆ.ಆರ್.ಇ.ಡಿ.ಎಲ್) ವತಿಯಿಂದ ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಇಎನ್ 54 ವಿಎಸ್‌ಸಿ 2014 ದಿ:28.02.2015.
2. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಎವ್ 54 ವಿಎಸ್‌ಸಿ 2014 ದಿ:12.08.2015.
3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಎನ್ 64 ವಿಎಸ್‌ಸಿ 2018 ದಿ:06.03.2018.
4. ಸರ್ಕಾರದ ಆದೇಶ ಸಂಖ್ಯೆ: ಇಎನ್ 63 ವಿಎಸ್‌ಸಿ 2018 ದಿನಾಂಕ:12.06.2018.
5. ಆಯವ್ಯಯ 2018-19ರಲ್ಲಿ ಸಂಪುಟ-7ರಂತೆ ಇಂಧನ ಇಲಾಖೆಗೆ ಮೀಸಲಿರಿಸಿರುವ ಅನುದಾನದಡಿ.
6. ಕೆ.ಆರ್.ಇ.ಡಿ.ಎಲ್ ರವರ ಪತ್ರ ಸಂಖ್ಯೆ: ಕೆಆರ್‌ಇಡಿಎಲ್/07/SOG-2/F41/2018/5061-62 ದಿನಾಂಕ: 26.07.2018.

********

<u>ಪ್ರಸ್ತಾವನೆ:</u>

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಮುಖಾಂತರ ಮೇಲೆ ಓದಲಾದ (1) ಮತ್ತು (2)ರಂತೆ ಅನುಷ್ಠಾನಗೊಳಿಸುತ್ತಿರುವ 5 ಹೆಚ್.ಪಿ ಸಾಮರ್ಥ್ಯದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳ ಯೋಜನೆಯಡಿ ಮೊದಲನೇ ಹಂತದಲ್ಲಿ 1009 ಸಂಖ್ಯೆಯ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳ ಅನುಷ್ಠಾನ ಕಾರ್ಯಕ್ರಮವನ್ನು ರಾಜ್ಯದ ಆಯ್ದ 11 ತಾಲ್ಲೂಕುಗಳಲ್ಲಿ, ಎರಡನೇ ಹಂತದಲ್ಲಿ 1530 ಸಂಖ್ಯೆಯ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು 48 ತಾಲ್ಲೂಕುಗಳಲ್ಲಿ ಮತ್ತು ಮೂರನೇ ಹಂತದಲ್ಲಿ 901 ಸಂಖ್ಯೆಯ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು 32 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು.

ಮೇಲೆ ಓದಲಾದ(3) ರಂತೆ ಹೊಸದಾಗಿ ವಿದ್ಯುತ್ ಸಂಪರ್ಕ ಹೊಂದುವ ಮತ್ತು ಹಾಲಿ ಸಂಪರ್ಕದಲ್ಲಿರುವ ಪಂಪ್‌ಸೆಟ್ ಸ್ಥಾವರಗಳ ರೈತರಿಗೂ ಅನ್ವಯವಾಗುವಂತೆ ಹಾಗೂ ಹೊಸದಾಗಿ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸುವ ಫಲಾನುಭವಿಗಳ ಸ್ಥಾವರಕ್ಕೆ ಗ್ರಿಡ್ ಸಂಪರ್ಕವಿಲ್ಲವೆಂದು ದೃಢೀಕರಿಸುವಂತೆ ಮೇಲೆ ಓದಲಾದ (1) ರಲ್ಲಿದ್ದ ಷರತ್ತನ್ನು ಸಡಿಲಿಸಿ ತಿದ್ದುಪಡಿ ಮಾಡಲಾಗಿದೆ. ಸದರಿ ಯೋಜನೆಯು ವರ್ಷ 2014-15ರಲ್ಲಿ ಪ್ರಾರಂಭಗೊಂಡಿದ್ದರೂ ಕೂಡ ಇದುವರೆವಿಗೂ ಫಲಾನುಭವಿಗಳ ಗುರುತಿಸುವಿಕೆಯಲ್ಲಿ ಆಗುತ್ತಿರುವ ವಿಳಂಬದಿಂದಾಗಿ ಯೋಜನೆಯನ್ನು ನಿಗದಿತ ಸಮಯದೊಳಗೆ ಕಾರ್ಯಗತಗೊಳಿಸಲು ಸಾಧ್ಯವಾಗದೇ, ಸದರಿ ಯೋಜನೆಗೆ ಹಂಚಿಕೆಯಾಗಿರುವ ಕೇಂದ್ರ/ರಾಜ್ಯ

ಸರ್ಕಾರದ ಅನುದಾನವನ್ನು ಪೂರ್ಣಮಟ್ಟದಲ್ಲಿ ಬಳಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲವಾದ್ದರಿಂದ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಯಲ್ಲಿ ಈಗಾಗಲೇ ಗುರುತಿಸಲಾಗಿರುವ ಫಲಾನುಭವಿಗಳನ್ನು ಹೊರತುಪಡಿಸಿ ಬಾಕಿ ಇರುವ ಸೌರ ಪಂಪ್‌ಸೆಟ್‌ಗಳನ್ನು ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಆನ್‌ಲೈನ್ ಪ್ರಕ್ರಿಯೆ ಮುಖಾಂತರ ಕ್ರೆಡಲ್ ವತಿಯಿಂದ ನೇರವಾಗಿ ರಾಜ್ಯಾದ್ಯಂತ ಹಂಚಿಕೆ ನೀಡಲು ಕ್ರಮ ಕೈಗೊಳ್ಳುವಂತೆ ಮೇಲೆ ಓದಲಾದ (4) ರಲ್ಲಿ ಆದೇಶಿಸಲಾಗಿದೆ.

ಸದರಿ ಯೋಜನೆಯಡಿ ಜುಲೈ–2018ರ ಅಂತ್ಯದವರೆಗೆ ಮೊದಲನೇ ಹಂತದಲ್ಲಿ 984 ಸಂಖ್ಯೆಯ ಎರಡನೇ ಹಂತದಲ್ಲಿ 394 ಸಂಖ್ಯೆಯ ಹಾಗೂ ಮೂರನೇ ಹಂತದಲ್ಲಿ 38 ಸಂಖ್ಯೆಯ ಪಂಪ್‌ಸೆಟ್‌ಗಳನ್ನು ಅಳವಡಿಸಿ ಚಾಲನೆಗೊಳಿಸಲಾಗಿದೆ.

ಪರ್ಯಾಯ ಶಕ್ತಿ ಮೂಲಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮೇಲೆ ಓದಲಾದ (5) ರಂತೆ ಸರ್ಕಾರವು ಇಂಧನ ಇಲಾಖೆಗೆ, 2018–19 ವರ್ಷದ ಆಯವ್ಯಯ ಸಂಪುಟ–7 ಅಭಿಯಾನ ಸಂಖ್ಯೆ: 24 ರಡಿಯ ಲೆಕ್ಕ ಶೀರ್ಷಿಕೆ 2801–80–800–1–08 ರಲ್ಲಿ ಸೌರಶಕ್ತಿ ಯೋಜನೆಗಳ ಅನುಷ್ಠಾನಕ್ಕೆ ಒಟ್ಟು ರೂ.10 (ಇತರೆ ಖರ್ಚುಗಳು:ರೂ.7.59 ಪರಿಶಿಷ್ಟ ಜಾತಿ ಉಪ ಯೋಜನೆ:ರೂ.1.71 ಮತ್ತು ಗಿರಿಜನ ಉಪ ಯೋಜನೆ:ರೂ.0.70) ಕೋಟಿಗಳನ್ನು ಮೀಸಲಿರಿಸಿದೆ.

ವರ್ಷ 2018–19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ರೂ.10 ಕೋಟಿಗಳನ್ನು, ಈಗಾಗಲೇ ಕೆ.ಆರ್.ಇ.ಡಿ.ಎಲ್ ವತಿಯಿಂದ ಜಾರಿಯಲ್ಲಿರುವ ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಯನ್ನು ಮುಂದುವರೆಸಲು ರೂ. 20.57 ಕೋಟಿ (ರಾಜ್ಯ ಸರ್ಕಾರದ ಅನುದಾನ:ರೂ.10 ಕೋಟಿ, ಫಲಾನುಭವಿಗಳ ವಂತಿಗೆ:ರೂ. 5.31 ಕೋಟಿ ಮತ್ತು ಎಂ.ಎನ್.ಆರ್.ಇ. ವಂತಿಗೆ (ರೂ. 85,000/– ಪ್ರತಿ ಪಂಪ್‌ಗೆ) : ರೂ. 5.31 ಕೋಟಿ) ಯೋಜನಾ ವೆಚ್ಚದಲ್ಲಿ ಒಟ್ಟು 625 ಸಂಖ್ಯೆಯ (ಸಾಮಾನ್ಯ: 526, ಪರಿಶಿಷ್ಟ ಜಾತಿ: 70 ಮತ್ತು ಪರಿಶಿಷ್ಟ ಪಂಗಡ: 29) ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್ ರವರು ಮೇಲೆ ಓದಲಾದ (6)ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಇಂಧನ ಇಲಾಖೆಗೆ ಸೌರಶಕ್ತಿ ಯೋಜನೆಗಳಿಗಾಗಿ ಮೀಸಲಿರಿಸಿರುವ ರೂ.10 ಕೋಟಿಗಳನ್ನು ಕೆ.ಆರ್.ಇ.ಡಿ.ಎಲ್ ನ ಮುಂದುವರೆದ ಯೋಜನೆಯಾದ ಸೌರಶಕ್ತಿ ಆಧಾರಿತ ಜಾಲಮುಕ್ತ

ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಈ ಕೆಳಗಿನಂತೆ ಆದೇಶಿಸಿದೆ:

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 170 ವಿಎಸ್‌ಸಿ 2018,**
**ಬೆಂಗಳೂರು, ದಿನಾಂಕ:29.08.2018**

2018-19ನೇ ಸಾಲಿನ ಲೆಕ್ಕ ಶೀರ್ಷಿಕೆ 2801-80-800-1-08 ರಂತೆ ಸೌರಶಕ್ತಿ ಯೋಜನೆಗಳ ಅನುಷ್ಠಾನಕ್ಕೆ ಇಂಧನ ಇಲಾಖೆಗೆ ಒದಗಿಸಿರುವ ರೂ.10 (ಇತರೆ ಖರ್ಚುಗಳು:ರೂ.7.59 ಪರಿಶಿಷ್ಟ ಜಾತಿ ಉಪ ಯೋಜನೆ:ರೂ.1.71 ಮತ್ತು ಗಿರಿಜನ ಉಪ ಯೋಜನೆ:ರೂ.0.70) ಕೋಟಿಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವತಿಯಿಂದ ಮುಂದುವರೆದ ಯೋಜನೆಯಾಗಿ ರೂ. 20.57 ಕೋಟಿ (ರಾಜ್ಯ ಸರ್ಕಾರದ ಅನುದಾನ:ರೂ.10 ಕೋಟಿ, ಫಲಾನುಭವಿಗಳ ವಂತಿಗೆ: ರೂ. 5.31 ಕೋಟಿ ಮತ್ತು ಎಂ.ಎನ್.ಆರ್.ಇ. ವಂತಿಗೆ (ರೂ. 85,000/- ಪ್ರತಿ ಪಂಪ್‌ಗೆ) : ರೂ. 5.31 ಕೋಟಿ) ಯೋಜನಾ ವೆಚ್ಚದಲ್ಲಿ ಒಟ್ಟು 625 ಸಂಖ್ಯೆಯ (ಸಾಮಾನ್ಯ: 526, ಪರಿಶಿಷ್ಟ ಜಾತಿ: 70 ಮತ್ತು ಪರಿಶಿಷ್ಟ ಪಂಗಡ: 29) ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಕ್ರಿಯಾ ಯೋಜನೆಗೆ ಈ ಕೆಳಕಂಡ ಷರತ್ತು/ನಿಬಂಧನೆಗೊಳಪಡಿಸಿ, ಅನುಮೋದನೆ ನೀಡಿ ಆದೇಶಿಸಿದೆ.

- ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು KTPP ಅಧಿನಿಯಮದನ್ವಯ ಮುಂದಿನ ಕ್ರಮ ಜರುಗಿಸುವುದು.
- ಸೌರಶಕ್ತಿ ಆಧಾರಿತ ಜಾಲಮುಕ್ತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸಲು ಫಲಾನುಭವಿಗಳ ಆಯ್ಕೆ ಮತ್ತು ಮಾನದಂಡಗಳ ಕುರಿತು ಮೇಲೆ ಓದಲಾದ (1), (2), (3) ಮತ್ತು (4) ರ ಆದೇಶಗಳಂತೆ ಮುಂದಿನ ಕ್ರಮ ಜರುಗಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ. ಮಂಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಇಂಧನ ಇಲಾಖೆ ಫೋನ್: 22034674.

ಇವರಿಗೆ,
ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ.

ಪ್ರತಿಗಳು:-

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಮೆಸ್ಕಾಂ/ಹೆಸ್ಕಾಂ/ಜೆಸ್ಕಾಂ/ಸೆಸ್ಕ್/ಹುಕ್ಕೇರಿ.

2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ. 39, "ಶಾಂತಿ ಗೃಹ" ಪ್ಯಾಲೇಸ್ ರಸ್ತೆ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಬಿಲ್ಡಿಂಗ್, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ನಿರ್ದೇಶಕರು(ಆರ್ಥಿಕ), ಇಂಧನ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಅಪರ ನಿರ್ದೇಶಕರು(ತಾಂತ್ರಿಕ), ಜಂಟಿ ನಿರ್ದೇಶಕರು (ಯೋಜನೆ/ನವೀಕರಿಸಬಹುದಾದ ಇಂಧನ) ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿರವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
11. ಶಾಖೆ ರಕ್ಷಾ ಕಡತ/ಹೆಚ್ಚುವರಿ ಪ್ರತಿ.